Akashvani: Bangalore
National Bulletin In Kannada
17.04.2026: 7.35AM
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

********

ಮುಖ್ಯಾಂಶಗಳು :

1. ಸಂಸತ್ ವಿಶೇಷ ಅಧಿವೇಶನ: ಉಭಯ ಸದನಗಳಲ್ಲಿ ನಾರಿ ಶಕ್ತಿ ವಂದನ್ ಅಧಿನಿಯಮ ಕುರಿತ ಚರ್ಚೆ ಮುಂದುವರಿಕೆ
2. ಮಹಿಳಾ ಮೀಸಲಾತಿ ಹೆಚ್ಚಳ ದೇಶದ ಭವಿಷ್ಯ, ದಿಕ್ಕು ರೂಪಿಸಲು ನಿರ್ಣಾಯಕ - ಪ್ರಧಾನಿ ನರೇಂದ್ರ ಮೋದಿ
3. ಅಣ್ವಸ್ತ್ರ ತಯಾರಿಕೆಗೆ ಬಳಸಬಹುದಾದ ಯುರೇನಿಯಂ ಹಸ್ತಾಂತರಿಸಲು ಇರಾನ್ ಭಾಗಶಃ ಸಮ್ಮತಿ - ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್
4. ಐಪಿಎಲ್ ಟಿ೨೦ ಕ್ರಿಕೆಟ್; ಮುಂಬೈ ಇಂಡಿಯನ್ಸ್ ವಿರುದ್ಧ ಪಂಜಾಬ್ ಕಿಂಗ್ಸ್‌ಗೆ ೭ ವಿಕೆಟ್ ಭರ್ಜರಿ ಜಯ

********

ನಿನ್ನೆಯಿಂದ ಆರಂಭವಾದ ಮೂರು ದಿನಗಳ ಸಂಸತ್ ವಿಶೇಷ ಅಧಿವೇಶನ ಇಂದು ಕೂಡ ಮುಂದುವರಿಯಲಿದೆ. ಲೋಕಸಭೆಯಲ್ಲಿ ನಿನ್ನೆ ತಡರಾತ್ರಿವವರೆಗೂ ಸಂವಿಧಾನ (೧೩೧ನೇ ತಿದ್ದುಪಡಿ) ಮಸೂದೆ, ೨೦೨೬, ಪುನರ್ವಿಂಗಡಣೆ ಮಸೂದೆ, ೨೦೨೬ ಮತ್ತು ಕೇಂದ್ರಾಡಳಿತ ಪ್ರದೇಶಗಳ ಕಾನೂನುಗಳು (ತಿದ್ದುಪಡಿ) ಮಸೂದೆ, ೨೦೨೬ ರ ಕುರಿತು ಚರ್ಚೆ ಮುಂದುವರಿಯಿತು. ಈ ಮೂರು ಶಾಸನಗಳು ಲೋಕಸಭೆ ಮತ್ತು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿವೆ. ನಾರಿ ಶಕ್ತಿ ವಂದನ್ ಅಧಿನಿಯಮ ಎಂದು ಜನಪ್ರಿಯವಾಗಿ ಕರೆಯಲ್ಪಡುವ ಸಂವಿಧಾನ (೧೦೬ನೇ ತಿದ್ದುಪಡಿ) ಕಾಯ್ದೆ, ೨೦೨೩, ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಸುಮಾರು ಮೂರನೇ ಒಂದು ಭಾಗದಷ್ಟು ಸ್ಥಾನಗಳನ್ನು ಮೀಸಲಿಡಲು ಅವಕಾಶ ಕಲ್ಪಿಸಿದೆ. ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್, ನಿನ್ನೆ ಲೋಕಸಭೆಯಲ್ಲಿ ಮಂಡಿಸಿದ ಸಂವಿಧಾನ (೧೩೧ನೇ ತಿದ್ದುಪಡಿ) ಮಸೂದೆ, ೨೦೨೬ ಲೋಕಸಭೆಯಲ್ಲಿ ಸ್ಥಾನಗಳ ಸಂಖ್ಯೆಯನ್ನು ೫೪೩ ರಿಂದ ೮೫೦ಕ್ಕೆ ಹೆಚ್ಚಿಸುವ ಉದ್ದೇಶವನ್ನು ಹೊಂದಿದೆ. ೮೫೦ ಸ್ಥಾನಗಳ ಪೈಕಿ ರಾಜ್ಯಗಳಿಂದ ೮೧೫ ಸದಸ್ಯರು ಮತ್ತು ಕೇಂದ್ರಾಡಳಿತ

ಪ್ರದೇಶಗಳಿಂದ ೩೫ ಸದಸ್ಯರನ್ನು ಆಯ್ಕೆ ಮಾಡಲಾಗುತ್ತದೆ. ಲೋಕಸಭೆ ಮತ್ತು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದು ಭಾಗದಷ್ಟು ಮೀಸಲಾತಿಯನ್ನು ಜಾರಿಗೆ ತರುವುದು ಮಸೂದೆಯ ಉದ್ದೇಶವಾಗಿದೆ. ೨೦೨೩ ರಲ್ಲಿ ಅಂಗೀಕರಿಸಲಾದ ನಾರಿ ಶಕ್ತಿ ವಂದನ್ ಅಧಿನಿಯಮವು ಕಾಯ್ದೆಯ ಪ್ರಾರಂಭದ ನಂತರ ಮೊದಲ ಜನಗಣತಿಯ ಆಧಾರದ ಮೇಲೆ ಪುನರ್ ವಿಂಗಡಣೆ ಪ್ರಕ್ರಿಯೆಯ ನಂತರ ಮಹಿಳೆಯರಿಗೆ ಮೂರನೇ ಒಂದು ಭಾಗದಷ್ಟು ಮೀಸಲಾತಿ ಜಾರಿಗೆ ಬರಲಿದೆ ಎಂದು ಒದಗಿಸಿದೆ. ಸಂವಿಧಾನ (೧೩೧ನೇ ತಿದ್ದುಪಡಿ) ಮಸೂದೆ ೨೦೨೬ ಮುಂದಿನ ಜನಗಣತಿ ಮತ್ತು ಪರಿಣಾಮವಾಗಿ ವಿಂಗಡಣೆ ಪ್ರಕ್ರಿಯೆಯು ಗಣನೀಯ ಸಮಯವನ್ನು ತೆಗೆದುಕೊಳ್ಳುತ್ತದೆ ಎಂದು ಹೇಳುತ್ತದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ, ನಿನ್ನೆ ಲೋಕಸಭೆಯಲ್ಲಿ ಕೇಂದ್ರಾಡಳಿತ ಪ್ರದೇಶಗಳ ಕಾನೂನುಗಳು (ತಿದ್ದುಪಡಿ) ಮಸೂದೆ ೨೦೨೬ ಅನ್ನು ಮಂಡಿಸಿದರು. ಈ ವಿಧೇಯಕವು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರ ಕಾಯ್ದೆ ೧೯೬೩, ದೆಹಲಿ ರಾಷ್ಟ್ರೀಯ ರಾಜಧಾನಿ ಪ್ರದೇಶ ಸರ್ಕಾರ ಕಾಯ್ದೆ ೧೯೯೧ ಮತ್ತು ಜಮ್ಮು ಮತ್ತು ಕಾಶ್ಮೀರ ಪುನರ್ ಸಂಘಟನೆ ಕಾಯ್ದೆ ೨೦೧೯ ಕ್ಕೆ ತಿದ್ದುಪಡಿ ತರುತ್ತದೆ. ಈ ಶಾಸನವು ಪುನರ್ ವಿಂಗಡಣೆ ಆಯೋಗದಿಂದ ಸಂಸದೀಯ ಮತ್ತು ವಿಧಾನಸಭಾ ಕ್ಷೇತ್ರಗಳ ಮರುಹೊಂದಾಣಿಕೆಗೆ ಅವಕಾಶ ನೀಡುತ್ತದೆ. ಲೋಕಸಭೆಯಲ್ಲಿ ಈ ಮೂರು ಮಸೂದೆಗಳ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ದೇಶದ ಜನಸಂಖ್ಯೆಯ ಶೇಕಡಾ ೫೦ರಷ್ಟು ಜನರನ್ನು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯ ಭಾಗವಾಗಿಸಬೇಕು ಎಂದು ಒತ್ತಿ ಹೇಳಿದರು. ನಾರಿ ಶಕ್ತಿಯು ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಮತ್ತು ನೀತಿ ನಿರೂಪಣೆಯಲ್ಲಿ ಅವರಿಗೆ ಸೂಕ್ತ ಪ್ರಾತಿನಿಧ್ಯ ನೀಡುವುದು ಇಂದಿನ ಅಗತ್ಯವಾಗಿದೆ ಎಂದು ಅವರು ಹೇಳಿದರು. ಈ ಐತಿಹಾಸಿಕ ಶಾಸನಕ್ಕೆ ರಾಜಕೀಯ ಬಣ್ಣ ನೀಡದಂತೆ ವಿರೋಧ ಪಕ್ಷಗಳಿಗೆ ಪ್ರಧಾನಿ ಮನವಿ ಮಾಡಿದರು, ಏಕೆಂದರೆ ಇದು ದೇಶದ ಪ್ರಜಾಪ್ರಭುತ್ವಕ್ಕೆ ಪ್ರಯೋಜನಕಾರಿಯಾಗಿದೆ ಎಂದು ಅವರು ಹೇಳಿದರು. ಇದು ದೇಶದ ಭವಿಷ್ಯ ಮತ್ತು ದಿಕ್ಕನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ ಎಂದು ಪ್ರತಿಪಾದಿಸಿದ ಪ್ರಧಾನಿ, ಅಭಿವೃದ್ಧಿ ಹೊಂದಿದ ಭಾರತವು ಕೇವಲ ಮೂಲಸೌಕರ್ಯ, ರೈಲ್ವೆ ಅಥವಾ ಆರ್ಥಿಕ ಸೂಚಕಗಳಿಗೆ ಸೀಮಿತವಾಗಿಲ್ಲ, ಆದರೆ ಮಹಿಳೆಯರ ಸಮಾನ ಭಾಗವಹಿಸುವಿಕೆಯ ಅಗತ್ಯವಿದೆ ಎಂದು ಅವರು ಒತ್ತಿ ಹೇಳಿದರು. ನೀತಿ ನಿರೂಪಣೆಯಲ್ಲಿ 'ಸಬ್ಕಾ ಸಾಥ್, ಸಬ್ಕಾ ವಿಕಾಸ್' ಮನೋಭಾವವನ್ನು ಸರ್ಕಾರ ಬಯಸುತ್ತದೆ ಎಂದು ಅವರು ತಿಳಿಸಿದರು.ದೇಶದ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಕೇವಲ ಸಂಖ್ಯೆಗಳ ಬಗ್ಗೆ ಅಲ್ಲ, ಆದರೆ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಬದ್ಧವಾಗಿದೆ ಎಂದು ಅವರು ಉಲ್ಲೇಖಿಸಿದರು. ಸುಮಾರು ಆರು

ಸಾವಿರದ ೭೦೦ ಬ್ಲಾಕ್ ಪಂಚಾಯತ್‌ಗಳ ಪೈಕಿ ಸುಮಾರು ಎರಡು ಸಾವಿರದ ೭೦೦ ಪಂಚಾಯತ್ ಗಳ ನೇತೃತ್ವವನ್ನು ಮಹಿಳೆಯರು ವಹಿಸಿದ್ದಾರೆ ಎಂದು ಹೇಳಿದ ಅವರು, ಇಂದು ಪ್ರಗತಿ ಸಾಧಿಸುತ್ತಿರುವ ದೇಶವು ಮಹಿಳೆಯರ ಮಹತ್ವದ ಕೊಡುಗೆಯನ್ನು ಹೊಂದಿದೆ ಮತ್ತು ಇದನ್ನು ಒಪ್ಪಿಕೊಳ್ಳಬೇಕು ಎಂದು ಪ್ರತಿಪಾದಿಸಿದರು. ಈ ಅನುಭವವು ಸದನದ ಭಾಗವಾದಾಗ, ಅದು ದಕ್ಷತೆಯನ್ನು ಅನೇಕ ಪಟ್ಟು ಹೆಚ್ಚಿಸುತ್ತದೆ ಎಂದು ಅವರು ತಿಳಿಸಿದರು. ಈ ಕಾನೂನನ್ನು ಜಾರಿಗೆ ತರುವಾಗ ಯಾವುದೇ ರಾಜ್ಯಕ್ಕೆ ಅನ್ಯಾಯವಾಗುವುದಿಲ್ಲ ಎಂದು ಪ್ರಧಾನಿ ಪ್ರತಿಪಾದಿಸಿದರು.

********

ಕ್ಷೇತ್ರ ಪುನರ್ ವಿಂಗಡಣೆ ನಂತರ ದಕ್ಷಿಣ ರಾಜ್ಯಗಳ ಸ್ಥಾನಗಳ ಸಂಖ್ಯೆಯನ್ನು ಕಡಿತಗೊಳಿಸಲಾಗುವುದಿಲ್ಲ. ಬದಲಿಗೆ ಹೆಚ್ಚಿಸಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದ್ದಾರೆ. ಕ್ಷೇತ್ರ ಪುನರ್ ವಿಂಗಡಣೆ ವೇಳೆ, ಎಲ್ಲಾ ರಾಜ್ಯಗಳ ಸೀಟುಗಳ ಪ್ರಮಾಣವನ್ನು ಶೇಕಡ ೫೦ರಷ್ಟು ಏರಿಸಲು ಕೇಂದ್ರ ಸರ್ಕಾರ ಪ್ರಸ್ತಾವನೆ ಮುಂದಿಟ್ಟಿರುವ ಕಾರಣ ಕರ್ನಾಟಕದ ಲೋಕಸಭಾ ಸ್ಥಾನ ಹಾಲಿ ಇರುವ ೨೮ ರಿಂದ ೨೦೨೯ರಲ್ಲಿ ೪೨ಕ್ಕೆ ಏರಲಿದೆ. ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ಸೀಟುಗಳ ಸಂಖ್ಯೆಯನ್ನು ಕ್ರಮವಾಗಿ ೩೮ ಮತ್ತು ೨೬ಕ್ಕೆ ಹೆಚ್ಚಿಸುವುದಾಗಿ ತಿಳಿಸಿದ್ದಾರೆ.

********

ಅಣ್ವಸ್ತ್ರ ತಯಾರಿಕೆಗೆ ಬಳಸಬಹುದಾದ ಪುಷ್ಟೀಕರಿಸಿದ ಯುರೇನಿಯಂ ಹಸ್ತಾಂತರಿಸಲು ಇರಾನ್ ಒಪ್ಪಿಕೊಂಡಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಶ್ವೇತಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎರಡೂ ದೇಶಗಳು ಶಾಂತಿ ಒಪ್ಪಂದದ ಹತ್ತಿರದಲ್ಲಿವೆ ಎಂದು ಹೇಳಿದ್ದಾರೆ. ಅಮೆರಿಕ ಮತ್ತು ಇರಾನ್ ಅತ್ಯಂತ ಯಶಸ್ವಿ ಮಾತುಕತೆಯ ಮೂಲಕ ಸಾಗುತ್ತಿವೆ ಮತ್ತು ಅವರು ಒಪ್ಪಂದ ಮಾಡಿಕೊಳ್ಳಲು ಉತ್ತಮ ಅವಕಾಶವಿದೆ ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಒಪ್ಪಂದ ನಡೆದರೆ, ಮುಕ್ತ ತೈಲ, ತೆರೆದ ಹಾರ್ಮುಜ್ ಜಲಸಂಧಿ ಮತ್ತು ಎಲ್ಲವೂ ಉತ್ತಮವಾಗಿರುತ್ತದೆ ಎಂದು ಅಮೆರಿಕ ಅಧ್ಯಕ್ಷರು ತಿಳಿಸಿದ್ದಾರೆ. ಕಳೆದ ವಾರಾಂತ್ಯದಲ್ಲಿ ಇಸ್ಲಾಮಾಬಾದ್‌ನಲ್ಲಿ ನಡೆದ ೨೧ ಗಂಟೆಗಳ ಮ್ಯಾರಥಾನ್ ಶಾಂತಿ ಮಾತುಕತೆಯಲ್ಲಿ ಅಮೆರಿಕ ಮತ್ತು ಇರಾನ್ ಒಪ್ಪಂದಕ್ಕೆ ಬರಲು ವಿಫಲವಾದವು, ಪರಮಾಣು ಇಂಧನ ಪುಷ್ಟೀಕರಣದ ಹಕ್ಕನ್ನು ಬಿಟ್ಟುಕೊಡಲು ಇರಾನ್ ನಿರಾಕರಿಸಿದೆ ಎಂದು ವಾಷಿಂಗ್ಟನ್ ಹೇಳಿತ್ತು.

********

ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು AI ಆಡಳಿತ ಮತ್ತು ಆರ್ಥಿಕ ಗುಂಪು - AIGEG ಅನ್ನು ರಚಿಸಿದೆ, ಇದು AI ಆಡಳಿತ ನೀತಿ ಅಭಿವೃದ್ಧಿ ಮತ್ತು ಸಮನ್ವಯಕ್ಕಾಗಿ ದೇಶದ ಕೇಂದ್ರ ಸಾಂಸ್ಥಿಕ ಕಾರ್ಯವಿಧಾನವಾಗಿ ಕಾರ್ಯನಿರ್ವಹಿಸುವ ಉನ್ನತ ಮಟ್ಟದ ಅಂತರ ಸಚಿವಾಲಯ ಸಂಸ್ಥೆಯಾಗಿದೆ. ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಈ ಸಂಸ್ಥೆಯ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ ಮತ್ತು ರಾಜ್ಯ ಸಚಿವರಾದ ಜಿತಿನ್ ಪ್ರಸಾದ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಾರೆ. AIGEG ಭಾರತದ AI ಆಡಳಿತ ಸಾಂಸ್ಥಿಕ ಚೌಕಟ್ಟಿನೊಳಗೆ ಅತ್ಯುನ್ನತ ಅಂತರ-ಸಚಿವಾಲಯ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ ಎಂದು ಸಚಿವಾಲಯ ತಿಳಿಸಿದೆ.

********

ಸಿಕ್ಕಿಂನ ಗ್ಯಾಂಗ್ಟಾಕ್‌ನಲ್ಲಿಂದು ಬೆಳಿಗ್ಗೆ ನಾರಿ ಶಕ್ತಿ ವಂದನ ಅಧಿನಿಯಮ್ ಕುರಿತು ಮಹಿಳಾ ರ‍್ಯಾಲಿ ನಡೆಯಲಿದೆ. ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕೃತಜ್ಞತೆ ಸಲ್ಲಿಸುವ ಸಲುವಾಗಿ ರಾಜ್ಯದ ಮಹಿಳಾ ಪ್ರಮುಖರು ಈ ರ‍್ಯಾಲಿಯನ್ನು ಆಯೋಜಿಸುತ್ತಿದ್ದಾರೆ. ರ‍್ಯಾಲಿಗೆ ಡಿಯೋರಾಲಿಯಲ್ಲಿ ಚಾಲನೆ ದೊರೆಯಲಿದ್ದು. ರಾಜ್ಯದ ಹಲವಾರು ಪ್ರಮುಖರು ಇಂದು ರ‍್ಯಾಲಿಯಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

********

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಕಳೆದ ರಾತ್ರಿ ನಡೆದ ಐಪಿಎಲ್ ಪಂದ್ಯದಲ್ಲಿ, ಪಂಜಾಬ್ ಕಿಂಗ್ಸ್ ತಂಡ ಮುಂಬೈ ಇಂಡಿಯನ್ಸ್ ತಂಡದ ವಿರುದ್ಧ ೭ ವಿಕೆಟ್‌ಗಳ ಜಯ ಸಾಧಿಸಿದೆ. ಮೊದಲು ಬ್ಯಾಟ್ ಮಾಡಿದ ಮುಂಬೈ, ಆರಂಭಿಕ ಆಟಗಾರ ಕ್ವಿಂಟನ್ ಡಿ ಕಾಕ್ ಅವರ ಆಕರ್ಷಕ ಶತಕದ ನೆರವಿನಿಂದ, ನಿಗದಿತ ೨೦ ಓವರ್‌ಗಳಲ್ಲಿ ೬ ವಿಕೆಟ್ ನಷ್ಟಕ್ಕೆ ೧೯೪ ರನ್ ಕಲೆ ಹಾಕಿತು. ಪಂಜಾಬ್ ಪರ ಅರ್ಶ್‌ದೀಪ್ ಸಿಂಗ್ ೨, ಮಾರ್ಕೋ ಯಾನ್ಸನ್ ಹಾಗೂ ಶಶಾಂಕ್ ಸಿಂಗ್ ತಲಾ ೧ ವಿಕೆಟ್ ಪಡೆದರು. ಗುರಿ ಬೆನ್ನತ್ತಿದ ಪಂಜಾಬ್, ಪ್ರಭ್‌ಸಿಮ್ರನ್ ಸಿಂಗ್ ಅವರ ೮೦ ರನ್ ಹಾಗೂ ನಾಯಕ ಶ್ರೇಯಸ್ ಅಯ್ಯರ್ ಅವರ ೬೬ ರನ್‌ಗಳ ನೆರವಿನಿಂದ ಕೇವಲ ೧೬.೨ ಓವರ್‌ಗಳಲ್ಲಿ ೧೯೮ ರನ್ ಗಳಿಸುವುದರೊಂದಿಗೆ ಜಯ ದಾಖಲಿಸಿತು.

********